ಶ್ರೀ ಜೆ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಕಂದಾಯ ಹಾಗೂ ಅರಣ್ಯ ಇಲಾಖೆಗೆ ಸಂಬಂಧಿಸಿದಂತೆ ಜಂಟಿಯಾಗಿ ಒಟ್ಟು 216984 ಎಕರೆ 15 ಗಂಟೆ ಭೂಮಿ ವಿಸ್ತೀರ್ಣ ಇದ್ದು, ಅ ವಿಸ್ತೀರ್ಣವು ಪೋಡಿ ಆಗಬೇಕಾಗಿರುತ್ತದೆ.

ಆ) ಪೋಡಿ ಕಾರ್ಯ ಬಾಕಿ ಇರುತ್ತದೆ.

ಇ) ತೀರ್ಥಹಳ್ಳಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಒಟ್ಟು 1900 ಸರ್ವೆ ನಂಬರುಗಳು ಇರುತ್ತದೆ.

	ಎಕರೆ–ಗುಂ.
ಕಂದಾಯ ಇಲಾಖೆಗೆ ಸಂಬಂಧಿಸಿದ ಭೂಮಿಯ ವಿಸ್ತೀರ್ಣ	138900–24
ಅರಣ್ಯ ಇಲಾಖೆಗೆ ಸಂಬಂಧಿಸಿದ ಭೂಮಿಯ ವಿಸ್ತೀರ್ಣ	78033–31
ಒಟ್ಟು	**216934–15**

ಈ) ಜಮೀನುಗಳನ್ನು ಅಳತೆ ಮಾಡಿ ವಿಂಗಡಿಸುವಾಗ ಅರಣ್ಯ ಇಲಾಖೆಯಿಂದ ಹೊರಡಿಸಿದ ಅಧಿಸೂಚನೆಯ ಪ್ರಕಾರ ಸರ್ವೆ ನಂಬರುಗಳನ್ನು ಅಥವಾ ಭಾಗಶಃ ಸರ್ವೆ ನಂಬರುಗಳನ್ನು ಅಧಿಸೂಚನೆಯನ್ನು ಆಧಾರವನ್ನಾಗಿ ಪರಿಗಣಿಸಿ, ಕಂದಾಯ ಮತ್ತು ಅರಣ್ಯ ಪ್ರದೇಶಗಳೆಂದು ವಿಂಗಡಿಸುವುದು.

852 ಶ್ರೀ ಕಿಮ್ಮನೆ ರತ್ನಾಕರ್ : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬಗರ್ ಹುಕುಂ ಸಮಿತಿ ರಚನೆಯಾಗಿ ಕಾರ್ಯ ನಿರ್ವಹಿಸುತ್ತಿದೆಯೇ;

ಆ) ರಚನೆ ಆಗದಿದ್ದಲ್ಲಿ ಕಾರಣವೇನು;

ಇ) ತೀರ್ಥಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿ ಎಷ್ಟು ಬಗರ್ ಹುಕುಂ ಅರ್ಜಿಗಳು ತೀರ್ಮಾನವಾಗದೆ ಬಾಕಿ ಇದೆ;

ಈ) ಮೇಲ್ಕಂಡ ಬಗರ್ ಹುಕುಂ ಅರ್ಜಿಗಳನ್ನು ಇತ್ಯರ್ಥಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಉ) ಇತ್ಯರ್ಥಪಡಿಸುವುದಾದಲ್ಲಿ, ಬಗರ್ ಹುಕುಂ ಸಮಿತಿ ರಚನೆ ಮಾಡಿ ಎಂದಿನಿಂದ ಕಾರ್ಯ ಆರಂಭ ಮಾಡಲಾಗುವುದು?

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಕರ್ನಾಟಕ ಭೂ ಕಂದಾಯ ಕಾಯ್ದೆಯ ಕಲಂ 94ಎ ಮತ್ತು 94ಬಿ ರಡಿಯಲ್ಲಿ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣಕ್ಕಾಗಿ ನಮೂನೆ 50 ಮತ್ತು 53ರಲ್ಲಿ ಸಲ್ಲಿಸಿರುವ ಅರ್ಜಿಗಳನ್ನು ವಿಲೇವಾರಿ ಪಡಿಸಲು ಕಾಯ್ದೆಯಲ್ಲಿ ಕಲ್ಪಿಸಲಾಗಿದ್ದ ಕಾಲಾವಧಿಯು ದಿ:26-04-2008ಕ್ಕೆ ಮುಕ್ತಾಯವಾಗಿರುವು ದರಿಂದ ಈ ಅವಧಿಯನ್ನು ಪುನಃ ವಿಸ್ತರಿಸಲು ಕಾಯ್ದೆಗೆ ತಿದ್ದುಪಡಿ ತರಲು ವಿಧೇಯಕವನ್ನು ಪ್ರಸಕ್ತ ಅಧಿವೇಶನದಲ್ಲಿ ಮಂಡಿಸಲಾಗಿದೆ. ಕಾಯ್ದೆಗೆ ತಿದ್ದುಪಡಿ ಜಾರಿಗೆ ಬಂದ ನಂತರ ಸಕ್ರಮೀಕರಣ ಸಮಿತಿಗಳನ್ನು ರಚಿಸಲಾಗುವುದು.

ಆ) ತೀರ್ಥಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿ ನಮೂನೆ 50 ರಲ್ಲಿ 434 ಅರ್ಜಿಗಳು, ನಮೂನೆ 53ರಲ್ಲಿ 9,830 ಅರ್ಜಿಗಳು, ಒಟ್ಟು 10,264 ಅರ್ಜಿಗಳು ಇತ್ಯರ್ಥಕ್ಕೆ ಬಾಕಿ ಇರುತ್ತವೆ.

ಇ) ಸಮಿತಿ ರಚನೆಯ ನಂತರ ಇತ್ಯರ್ಥಪಡಿಸಲು ಕ್ರಮ ಕೈಗೊಳ್ಳಲಾಗುವುದು.

ಈ) ಕಾಯ್ದೆಗೆ ತಿದ್ದುಪಡಿ ಜಾರಿಗೆ ಬಂದ ನಂತರ ಸಕ್ರಮೀಕರಣ ಸಮಿತಿಗಳನ್ನು ರಚಿಸಲಾಗುವುದು.

853 ಶ್ರೀ ಕಿಮ್ಮನೆ ರತ್ನಾಕರ್ : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1964 ಕಲಂ 94ಸಿ ಭೂ ಕಂದಾಯ ಕಾಯ್ದೆಯನ್ನು ಅರ್ಜಿ ನೀಡಿ ಸಕ್ರಮಗೊಳಿಸಲು ಕಾಲಮಿತಿಯನ್ನು ವಿಸ್ತರಿಸಲು ಸರ್ಕಾರ ಯಾವುದಾದರೂ ಕ್ರಮ ತೆಗೆದುಕೊಂಡಿದೆಯೇ;

ಆ) ಕೈಗೊಂಡಿದ್ದಲ್ಲಿ, ಕಾಲಮಿತಿಯನ್ನು ಮತ್ತು ವಿಸ್ತರಣೆಯ ಅವಧಿ-ಯನ್ನು ಎಲ್ಲಿಯವರೆಗೆ ನಿಗದಿಪಡಿಸಿದೆ?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಇಂತಹ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.